



ಪ್ರದರ್ಶನಗಳ ಮೈನವಿರೇಳಿಸುವ ದೃಶ್ಯಗಳ ಕಣ್ಣಿನ ಹಬ್ಬವೇ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನ ಅನುಭವ ಕಥನದ ಇತಿಹಾಸವನ್ನು ಬಿಚ್ಚಿಟ್ಟಿತ್ತು.

### ಮೈಸೂರಿನ ಹೆಗ್ಗಳಿಕೆ

ಮೈಸೂರಿಗೆ ಈ ಹೆಗ್ಗಳಿಕೆ ಬರಲು ಒಂದು ಐತಿಹಾಸಿಕ ಕಾರಣವೂ ಇದೆ. ಒಂದರ್ಥದಲ್ಲಿ ರಾಜ್ಯದ ಸ್ಕೌಟ್ಸ್ ಚಳವಳಿ ಆರಂಭ ಆದದ್ದೇ ಮೈಸೂರಿನಲ್ಲಿ. 1917ರಲ್ಲಿ ಸ್ಕೌಟಿಂಗ್ ಚಳುವಳಿಯು ಗಂಡು ಮಕ್ಕಳಿಗಾಗಿ ಅಧಿಕೃತವಾಗಿ ಆರಂಭವಾಗಿತ್ತು. ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಇದಕ್ಕೆ ಪೋಷಕರಾಗಿದ್ದರು. ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಮುಖ್ಯ ಸ್ಕೌಟ್, ರಾಜಕುಮಾರ ಜಯಚಾಮರಾಜೇಂದ್ರ ಒಡೆಯರ್ ಮುಖ್ಯ ಕಬ್ ಆಗಿದ್ದರು. ಮಹಾರಾಜರು ಮೈಸೂರು ಸಂಸ್ಥಾನದ ಎಲ್ಲಾ ಶಾಲೆಗಳಲ್ಲಿ ಸ್ಕೌಟ್ ತಂಡವನ್ನು ಆರಂಭಿಸಬೇಕೆಂದು ಆದೇಶ ನೀಡಿದ್ದರು. 1927ರಲ್ಲಿ ಮಹಾರಾಣಿ ವಾಣಿ ವಿಲಾಸ ಅಮ್ಮಣ್ಣಿ 'ಚೀಫ್ ಗೈಡ್' ಆಗಿ ಚಳವಳಿ ಆರಂಭಿಸಿದರು ಎಂಬ ಇತಿಹಾಸದಲ್ಲಿ ದಾಖಲಾಗಿದೆ. ಹೀಗಾಗಿ ಮೈಸೂರು ಜಾಂಬೂರಿಗೆ ವಿಶೇಷ ಮಹತ್ವ ಬಂದಿತ್ತು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ದೇಶದ ಒಂದು ಪ್ರತಿಷ್ಠಿತ ಸ್ವಯಂ ಸೇವಾ ಸಂಸ್ಥೆ. ದೇಶದ ಯುವ ಜನಾಂಗ ಭವಿಷ್ಯದ ಹತ್ತು ಹಲವಾರು ಭವ್ಯ ಕನಸುಗಳನ್ನು ಹೊಂದಿದ್ದರೂ, ಗೊತ್ತುಗುರಿಯಿಲ್ಲದೆ ಸಾಗುತ್ತಿದೆ. ಇವರು ಸಾಮರಸ್ಯದ ಜೊತೆಗೆ ಸೌಹಾರ್ದದಿಂದ ಬದುಕುವುದನ್ನು ಕಲಿಯುವ ಅಗತ್ಯವಿದೆ. ಬಹುಭಾಷೆ, ಬಹು ಸಂಸ್ಕೃತಿಯ ಭಾರತದಂಥ ಬೃಹತ್ ಪ್ರಜಾಪ್ರಭುತ್ವವಾದಿ ದೇಶಕ್ಕೆ ರಾಷ್ಟ್ರೀಯ ಭಾವೈಕ್ಯತೆ ಸಾರುವ ಯುವಜನರ ಪಡೆಯನ್ನು ತಯಾರಿಸುವ ನಿಟ್ಟಿನಲ್ಲಿ ಶತಮಾನದಿಂದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಶ್ರಮಿಸುತ್ತಿದೆ.

2020ರ ವೇಳೆಗೆ ಜಗತ್ತಿನಲ್ಲೇ ಅತಿ ಹೆಚ್ಚು ಯುವ ಜನಾಂಗ ಹೊಂದಿದ ದೊಡ್ಡ ದೇಶ ಭಾರತ ಎಂದು ಹೆಗ್ಗಳಿಕೆಗೆ ಪಾತ್ರವಾಗುತ್ತಿದೆ. ಸ್ಕೌಟ್ಸ್ ಮತ್ತು ಗೈಡ್ಸ್ ಶಿಸ್ತು, ಕೌಶಲ, ಸಹಕಾರ, ದೇಶ ಪ್ರೇಮ ಬೆಳೆಸಲು ಹಾಗೂ ದೇಶಕ್ಕೆ ಸೇವೆ ಸಲ್ಲಿಸುವ ಮನೋಭಾವ ಬೆಳೆಸಲು ಸಹಕಾರಿಯಾಗುತ್ತಿದೆ.

ಹಲವು ಮಧುರ ಕ್ಷಣಗಳಿಗೆ ಜಾಂಬೂರಿ ಸಾಕ್ಷಿಯಾಯಿತು. ಲೇಸರ್ ಷೋ, ಗಾಳಿಪಟ ಹಾರಾಟ, ವಿಜ್ಞಾನ ಮತ್ತು ತಂತ್ರಜ್ಞಾನ ಪ್ರದರ್ಶನ, ರಕ್ತದಾನ, ಸಾಹಸ ಚಟುವಟಿಕೆಗಳ ಜೊತೆಗೆ ಸಂಸ್ಕೃತಿ, ಕಲೆ ಬಿಂಬಿಸುವ ಕಾರ್ಯಕ್ರಮಗಳನ್ನು ವಿವಿಧ ರಾಜ್ಯಗಳ ಪ್ರತಿನಿಧಿಗಳು ಪ್ರದರ್ಶಿಸಿದರು. ಗಡಿರಕ್ಷಣಾ ಪಡೆ, ಸೇನಾ ತಂಡಗಳು ವಿಶೇಷ ಪ್ರದರ್ಶನ ನೀಡಿದವು.

ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್‌ಗೆ ಪ್ರಾಮಾಣಿಕ ಸೇವೆಗೈದ ಡಾ. ಸಂಜೀವ್ ಕಾಮತ್, ಜಸ್ಟೀಸ್ ಶಂಕರ ನಾರಾಯಣ, ಮೇಜರ್ ವೈವಿಕೆ ಮೂರ್ತಿ, ಪ್ರೊ. ಪಿ ಶಿವಶಂಕರ್, ಕೊಂಡಜ್ಜಿ ಬಸಪ್ಪ, ವಿ ಪಿ ದೀನದಯಾಳು ನಾಯ್ಡು ಅವರು ರಾಜ್ಯ ಸಂಸ್ಥೆಯ ಮುಖ್ಯ ಆಯುಕ್ತರುಗಳಾಗಿ ಹಗಲಿರುಳು ಶ್ರಮಿಸಿ ಕರ್ನಾಟಕದಲ್ಲಿ ಸ್ಕೌಟಿಂಗ್ ಚಳುವಳಿ ಉತ್ತುಂಗಕ್ಕೇರಲು ಮುನ್ನುಡಿ ಹಾಕಿದವರು. ಕೊಂಡಜ್ಜಿ ಬಸಪ್ಪನವರು ಸಕ್ರೀಯವಾಗಿ ರಾಜಕಾರಣದಲ್ಲಿದ್ದರೂ ಸಮಾಜ ಸೇವೆಯಲ್ಲಿ ಅವರಿಗೆ ವಿಶೇಷ ಒಲವಿದ್ದುದರಿಂದ ತಮ್ಮ ಹುಟ್ಟೂರು ಕೊಂಡಜ್ಜಿ ಬಳಿ ನೂರು ಎಕರೆ ಪ್ರದೇಶದಲ್ಲಿ ಸ್ಕೌಟ್ಸ್ ಗೈಡ್ಸ್ ತರಬೇತಿ ಕೇಂದ್ರ ಸ್ಥಾಪಿಸಿದ್ದಾರೆ. ಅಂತೆಯೇ ಹಲವಾರು ಮಹನೀಯರುಗಳ ಸಹಾಯ ಸಹಕಾರಗಳಿಂದ ಬೆಂಗಳೂರು, ದೊಡ್ಡಬಳ್ಳಾಪುರ, ಹುಬ್ಬಳ್ಳಿ, ಉಡುಪಿ, ಮಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಅತ್ಯುತ್ತಮ ಸ್ಕೌಟ್ಸ್ ಗೈಡ್ಸ್ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ರಾಜ್ಯ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮುಖ್ಯ ಆಯುಕ್ತರಾಗಿ ಪಿ.ಜಿ.ಆರ್.ಸಿಂಧ್ಯ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯ ಸರಕಾರ ಈ ಜಾಂಬೂರಿಗಾಗಿ 12 ಕೋಟಿ ರೂಪಾಯಿ ಬಿಡುಗಡೆ ಮಾಡಿತ್ತು.



ನಾಲ್ಕು ವರ್ಷಗಳಿಗೊಮ್ಮೆ ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಈ ಜಾಂಬೂರಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವಂತೆಯೇ ಸಾಗಿ ಬಂದಿದೆ. ಈ ಸಮಾವೇಶವನ್ನು ಸ್ಥಳೀಯ ಮಟ್ಟದಲ್ಲಿ ವರ್ಷಕ್ಕೊಮ್ಮೆ ರ್‍ಯಾಲಿ ಎಂದು, ಜಿಲ್ಲಾ ಮಟ್ಟದಲ್ಲಿ ಎರಡು ವರ್ಷಕ್ಕೊಮ್ಮೆ ಕ್ಯಾಂಪೊರಿ ಎಂದು ಹಾಗೂ 3 ವರ್ಷಕ್ಕೊಮ್ಮೆ ರಾಜ್ಯ ಮಟ್ಟದಲ್ಲಿ ಜಾಂಬೂರೇಟ್ ಎಂದೂ ಕರೆಯಲಾಗುತ್ತದೆ.